**ದಿನಾಂಕಃ 03/01/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

1. ಪಿಡಿಓ ರವರ ಪತ್ರವನ್ನು ನಿಪಿ-49 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದ

ಅಬ್ದುಲ್ ಗಫಾರ್ ರವರು ನನ್ನ ಅಣ್ಣ. ದಾವಾ ಸ್ವತ್ತುಗೆ ಸಬಂಧಿಸಿದಂತೆ ನನಗೂ ಮತ್ತು ನನ್ನ ಅಣ್ಣನಿಗೆ 50 ವರುಷಗಳಿಂದ ವ್ಯಾಜ್ಯ ಇದೆ ಎಂದರೆ ಸರಿ. ರಹಮತ್ ಬಿ ನನ್ನ ಅಣ್ಣನ ಹೆಂಡತಿ. ಮುಸ್ತಾಫ ನನ್ನ ಬಾಮೈದ. ಉಮರ್ ಆಲಿ ಸಹ ನನ್ನ ಬಾಮೈದ. ರಾಬಿಯಾ ನನ್ನ ನಾದನಿ. ಫಾತಿಮಾ ಬಿ ನನ್ನ ಹೆಂಡತಿ. ದಾವಾ ಸ್ವತ್ತುಗೆ ಸಂಬಂಧಿಸಿದಂತೆ ನನ್ನ ಅತ್ತಿಗೆ ಮತ್ತು ಬಾಮೈದ ನನ್ನ ಹೆಂಡತಿ ಹಾಗೂ ನಾದಿನಿಯ ವಿರುದ್ಧ ಹೆಚ್ಚುವರಿ ಹಿರಿಯ ಶ್ರೇಣಿ ನ್ಯಾಯಾಲಯ, ಹುಣಸೂರು ರವರ ಮುಂದೆ ಓ ಎಸ್ 84/2009 ಅನ್ನು ಹೂಡಿದ್ದರು ಎಂದರೆ ಸರಿ. ದಿಃ 01.02.2011 ರಂದು ಸದರಿ ದಾವೆಯು ಡಿಕ್ರಿ ಆಗಿದೆ ಎಂದರೆ ಸರಿ. ಸದರಿ ಡಿಕ್ರಿಯಾದ ನಂತರ ಎಫ್ ಡಿ ಪಿ 33/2013 ಅನ್ನು ಅಂತಿಮ ಡಿಕ್ರಿಗೋಸ್ಕರ ಹೂಡಿದ್ದರು ಮತ್ತು ಅದು ಅಂತಿಮ ಡಿಕ್ರಿಯಾಗಿದೆ ಎಂದರೆ ಸರಿ. ಸದರಿ ಅಂತಿಮ ಡಿಕ್ರಿಯಂತೆ ದಾವಾ ಸ್ವತ್ತು ಹಂಚಿಕೆಯಾಗಿದೆ ಎಂದರೆ ಸರಿಯಲ್ಲ. ಸದರಿ ಅಂತಿಮ ಡಿಕ್ರಿಯ ವಿರುದ್ಧ ನಾನು ಮಾನ್ಯ 8 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಆರ್ ಎ 46/2017 ರಂತೆ ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಮೇಲ್ಮನವಿ ದಿಃ 09.12.2017 ರಂದು ವಜಾಗೊಂಡಿತು ಎಂದರೆ ಸರಿ. ಅಂತಿಮ ಡಿಕ್ರಿಯಾದ ನಂತರ ನನ್ನ ಮತ್ತು ಇತರರ ಹೆಸರಿನಲ್ಲಿ ದಾವಾ ಸ್ವತ್ತುನ ಜಂಟಿ ಖಾತೆ ಇದೆ ಎಂದರೆ ಸರಿಯಲ್ಲ. ಜಂಟಿ ಖಾತೆ ಇರುವುದರಿಂದ ನನಗೆ ಮಾತ್ರ ದಾವಾ ಸ್ವತ್ತುನ ಮೇಲೆ ಹಕ್ಕಿಲ್ಲ ಎಂದರೆ ಸರಿಯಲ್ಲ.

2. ನಿಪಿ–48 ರ ಎಂ ಆರ್ ವಿರುದ್ಧ ನನ್ನ, ತಹಸೀಲ್ದಾರ್, ಉಪ ವಿಭಾಗಾಧಿಕಾರಿ ಮತ್ತು ಡಿಸಿ ರವರ ವಿರುದ್ಧ ನನ್ನ ಅಣ್ಣ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂಪಿ ನಂ. 41431-32/2010 ಅನ್ನು ಹೂಡಿದ್ದರು ಎಂದರೆ ಸರಿ. ಸದರಿ ಅರ್ಜಿಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಸಿವಿಲ್ ನ್ಯಾಯಾಲಯಕ್ಕೆ ಹೋಗಿ ಎಂದು ಆದೇಶಿಸಿದೆ ಎಂದರೆ ಸರಿ. ನನ್ನ ಅಣ್ಣ ನನ್ನ ಮತ್ತು ಇತರರ ವಿರುದ್ಧ ಆರ್ ಎಫ್ ಎ 288/2002 ಅನ್ನು ಹೂಡಿದ್ದು, ಮಾನ್ಯ ಉಚ್ಚ ನ್ಯಾಯಾಲಯ ಸದರಿ ಅಪೀಲನ್ನು ವಜಾಗೊಳಿಸಿದೆ ಎಂದರೆ ಸರಿ.

3. ನಾನು ದಿಃ 03.12.2025 ರಂದು ಸಲ್ಲಿಸಿದ ಪ್ರಮಾಣ ಪತ್ರದ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಗ್ರಾಮ ಪಂಚಾಯಿತಿಗೆ ಸಲ್ಲಿಸಿದ ಅರ್ಜಿಯ ದಿನಾಂಕ ಗೊತ್ತಿಲ್ಲ. ಸದರಿ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಆದರೆ ಹಿಂಬರಹ ನೀಡಿದ್ದಾರೆ. ಹಿಂಬರಹವನ್ನು ಯಾವ ದಿನಾಂಕದಂದು ನೀಡಿದರು ಎಂದು ಗೊತ್ತಿಲ್ಲ. ಹಿಂಬರಹವನ್ನು ಪಂಚಾಯಿತಿಯವರೊಂದಿಗೆ ಶರೀಕಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಬರೆದುಕೊಟ್ಟ ದಾನ ಪತ್ರವು ಕಾನೂನು ಬದ್ಧವಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುನ ದಕ್ಷಿಣ ದಿಕ್ಕಿನಲ್ಲಿರುವ ಮಸೀದಿಯ ಸ್ವತ್ತನ್ನು ಒತ್ತುವರಿ ಮಾಡಿದ್ದು, ಸದರಿ ಸ್ವತ್ತನ್ನು ಕಬಳಿಸಲು ಸುಳ್ಳು ದಾವೆ ಹೂಡಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

1 ನೇ **ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
ಪಿರಿಯಾಪಟ್ಟಣ.